ದಿ:**18.10.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲು:- ಆರೋಪಿ ಪರ Sri.L.U., ವಕೀಲರಿಂದ:-

ನನ್ನ ಖಾಯಂ ವಿಳಾಸ ವೆಂಕಟೇಶಪುರ ಇರುತ್ತದೆ ಎಂದರೆ ಸರಿ. ಆರೋಪಿಯು ತನ್ನ ಗಂಡನ ಮನೆ ದಾವಣಗೆರೆಯಲ್ಲಿ ಖಾಯಂ ಆಗಿ ವಾಸವಿರುತ್ತಾರೆ ಎಂದರೆ ಸರಿ. ಆರೋಪಿಯು ಸುಮಾರು **8-10** ವರ್ಷಗಳಿಂದ ಪರಿಚಯ ಇರುತ್ತಾರೆ. ನಾನು ಆರೋಪಿ ವಿರುದ್ಧ ಪಿರ್ಯಾದಿ ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಆರೋಪಿಯು ಒಂದು ಅಂಗಡಿ ಇಟ್ಟುಕೊಂಡಿರುತ್ತಾರೆ. ಆರೋಪಿ ಮತ್ತು ಆಕೆಯ ಗಂಡ ಇಬ್ಬರು ಬಂದು ನಮ್ಮ ಮನೆಗೆ ಬಂದು ರೂ.3 ಲಕ್ಷ ಹಣವನ್ನು ನನ್ನಿಂದ ಪಡೆದುಕೊಂಡಿರುತ್ತಾರೆ. ಸದರಿ ವಿಚಾರವನ್ನು ದೂರಿನಲ್ಲಿ ತಿಳಿಸಿರುತ್ತೇನೆ. ನಾನು ದಿ:20.12.2022 ರಂದು ಆರೋಪಿಗೆ ರೂ.**3** ಲಕ್ಷ ಹಣ ನೀಡಿರುತ್ತೇನೆ. ಸದರಿ ದಿನದ ಒಂದು ವಾರಕ್ಕಿಂತ ಹಿಂದೆ ಬಂದು ಆರೋಪಿ ನನ್ನ ಬಳಿ ಬಂದು ಹಣ ಕೇಳಿರುತ್ತಾರೆ. ಈ ವಿಚಾರವನ್ನು ನನ್ನ ದೂರು, ಮುಖ್ಯ ವಿಚಾರಣೆ, ನೋಟೀಸಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ನಾನು ನಿಪಿ**1** ಚೆಕ್ ನ್ನು ಭದ್ರತೆ ಪಡೆದುಕೊಂಡು ಹಣ ನೀಡಿರುತ್ತೇನೆ. ನನಗೆ ಹಣ ನೀಡದ ದಿನದಂದೇ ದಿ:**21.02.2023** ಎಂದು ನಮೂದಿಸಿ ನಿಪಿ**1** ಚೆಕ್ ನ್ನು ನೀಡಿರುತ್ತಾರೆ. ನನ್ನ ಪಿರ್ಯಾದಿನ ಪ್ಯಾರಾ ನಂ:**2** ರಲ್ಲಿ ಇರುವ ದಿ:**20.02.2023** ಅನ್ನು ದಿ:**21.02.2023** ಎಂದು ತಿದ್ದಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ**1** ಚೆಕ್ ನ್ನು ದಿ:**21.02.2023** ನ್ನು ನಗದೀಕರಣಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ**1** ಚೆಕ್ ನ್ನು ನಗದೀಕರಣಕ್ಕೆ ಸಲ್ಲಿಸಿದಾಗ ಬ್ಯಾಂಕ್ ಖಾತೆಗೆ ಚೆಲನ್ ಮೂಲಕ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಬ್ಯಾಂಕ್ ಚೆಲನ್ ನ್ನು ಈ ಪ್ರಕರಣದಲ್ಲಿ ಸಲ್ಲಿಸಿರುವುದಿಲ್ಲ. ನಿಪಿ**2** ರಲ್ಲಿ ನಾನು ಯಾವ ದಿನದಂದು ನನ್ನ ಖಾತೆ ಜಮೆ ಮಾಡಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪಿರ್ಯಾದಿನ ಪುಟ ನಂ:**2** ರ ಪ್ಯಾರಾ ನಂ:**2** ರಲ್ಲಿ ನಾನು ನಿಪಿ**1** ಚೆಕ್ ನ್ನು ದಿ:**20.02.2023** ರಂದು ನಗದೀಕರಣಕ್ಕೆ ಸಲ್ಲಿಸಿರುತ್ತೇನೆ ಎಂದು ನಮೂದು ಇರುತ್ತದೆ ಎಂದರೆ ಸರಿ. ನಾನು ಬ್ಯಾಂಕಿಗೆ ಜಮೆ ಮಾಡುವ ಕಾಲಕ್ಕೆ ಚೆಲನ್ ನ್ಯಾಯಾಲಯಕ್ಕೆ ನೀಡಿದರೆ ಪ್ರಕರಣಕ್ಕೆ ತೊಂದರೆ

ಆಗುತ್ತದೆ ಎಂದು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ನೋಟೀಸು ಪಿರ್ಯಾದಿ ಯಲ್ಲಿ ಆರೋಪಿಗೆ ನೀಡಿದ ಹಣ ಯಾವ ರೀತಿ ಬಂದ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ**1** ಚೆಕ್ ನ್ನು ನನ್ನ **SBI** ಖಾತೆಗೆ ಜಮೆ ಮಾಡಿರುತ್ತೇನೆ. ನಿಪಿ**2** ನಾನು ಪಡೆಯುವಾಗ ಕರ್ನಾಟಕ ಗ್ರಾಮೀಣ ಬ್ಯಾಂಕಿನ ಚೆಲನ್ ನ್ನು ನನಗೆ ನೀಡಿರುವುದಿಲ್ಲ. ನಿಪಿ**2** ಸ್ವೀಕರಿಸಿದ ನಂತರ ನೋಟೀಸು ಕಳುಹಿಸುವ ಮುಂಚೆ ಆರೋಪಿಗೆ ನಾನು ನಿಪಿ**1** ಚೆಕ್ ವಾಪಾಸಾದ ಬಗ್ಗೆ ತಿಳಿಸಿರುತ್ತೇನೆ. ನಾನು ಆರೋಪಿಯ ಮನೆಯ ಬಳಿ ಹೋಗಿ ಸದರಿ ವಿಚಾರ ತಿಳಿಸಿರುತ್ತೇನೆ. ನಾನು ನಿಪಿ**2** ಸ್ವೀಕರಿಸಿದ ಮರು ದಿನ ಆರೋಪಿಗೆ ಸದರಿ ವಿಚಾರ ತಿಳಿಸಿರುತ್ತೇನೆ. ಸದರಿ ವಿಚಾರವನ್ನು ನಾನು ಇದೇ ಮೊದಲ ಬಾರಿಗೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

(ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಹಿ

ಸಿವಿಲ್ ನ್ಯಾಯಾಧೀಶರು, ಜಗಳೂರು